ಒ.ಎಸ್.ನಂ:83/2017
ಪಿ.ಡಬ್ಲೂ.3

**<u>ದಿ:21.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ಪ್ರತಿವಾದಿ ನಂ:1 ಪರ ಶ್ರೀ.E.O., ವಕೀಲರಿಂದ:-

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಉದ್ದಗಟ್ಟ ಗ್ರಾಮದ ಸರ್ವೆ ನಂ:59/ಪಿ ರ 02 ಎಕರೆ 37 ಗುಂಟೆ ಮತ್ತು ರೆಡ್ಡಿಹಳ್ಳಿ ಗ್ರಾಮದ ಸರ್ವೆ ನಂ:9/1 ರ 01 ಎಕರೆ 03 ಗುಂಟೆ ಚಕ್ಕುಬಂದಿ ಒಂದೇ ಇರುತ್ತದೆ. ಸರ್ವೆ ನಂ:9/1 ರ ಜಮೀನು ಸರ್ವೆ ನಂ:59/ಪಿ ರ ಉತ್ತರ ದಿಕ್ಕಿನಲ್ಲಿ ಇರುತ್ತದೆ. ನಾನು ಸದರಿ ಜಮೀನುಗಳ ಸರ್ವೆ ಸ್ಕೆಚ್‌ಗಳನ್ನು ಪರಿಶೀಲನೆ ಮಾಡಿರುತ್ತೇನೆ. ರೆಡ್ಡಿಹಳ್ಳಿ ಸರ್ವೆ ನಂ:9/1 ಜಮೀನು ಉದ್ದಗಟ್ಟ ಸರ್ವೆ ನಂ:59/ಪಿ ರ ಉತ್ತರ ದಿಕ್ಕಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯೂ ವಾದಿಯವರ ತಂದೆಗೆ ಕ್ರಯ ಮಾಡಿಕೊಟ್ಟಿರುವ ಬಗ್ಗೆ ನಾನು ದಾಖಲೆಯನ್ನು ಪರಿಶೀಲಿಸಿರುತ್ತೇನೆ. ನಾನು ಸದರಿ ವ್ಯವಹಾರ ನಡೆಯುವಾಗ ಹಾಜರು ಇರುವುದಿಲ್ಲ. ನನಗೆ ವಾದಿಯವರು ತಿಳಿಸಿದ ಹಾಗೇ ಪ್ರತಿವಾದಿ ತಂದೆಯೂ ಜಮೀನನ್ನು ಅಳತೆ ಮಾಡಿ ಕ್ರಯಕ್ಕೆ ಕೊಟ್ಟಿರುವುದಾಗಿ ವಾದಿ ತಿಳಿಸಿರುತ್ತಾರೆ. ವಾದಿಯವರ ಕಡೆಯಿಂದ ನಾನು ಅಳತೆ ಸಂಬಂದಪಟ್ಟ ದಾಖಲೆಗಳನ್ನು ನೋಡಿರುತ್ತೇನೆ. ನಾನು ಸದರಿ ಆಸ್ತಿಗಳ ಸ್ಕೆಚ್‌ನ್ನು ನೋಡಿರುತ್ತೇನೆ. ವಾದಿಯವರು ಎಂದಿಗೂ ಕೂಡ ಜಮೀನನ್ನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಸರ್ವೆ ನಂ:59 ಮತ್ತು ಸರ್ವೆ ನಂ:9/1 ರ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳು ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಬೋರ್ ವೆಲ್ ಹಾಕಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಕೊರೆಸಿದ ಬೋರ್ ವೆಲ್ ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಬರುತ್ತದೆ ಎಂದರೆ ಸಾಕ್ಷಿಯೂ ದಕ್ಷಿಣ ದಿಕ್ಕಿನಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಕೊರೆಸಿದ ಬೋರ್ ವೆಲ್‌ಗೆ ಕೆಇಬಿ ರವರು ವಿದ್ಯುತ್ ಸಂಪರ್ಕ ನೀಡಿರುತ್ತಾರೆ ಎಂದರೆ ಸರಿ. ಸದರಿ ವಿದ್ಯುತ್ ಸಂಪರ್ಕಕ್ಕೆ ಕಂಬಗಳನ್ನು ಹಾಕಿರುತ್ತಾರೆ ಎಂದರೆ ಸರಿ. ನಿಡಿ1 ರಲ್ಲಿ

ಕಾಣುವ ಬೋರ್‌ವೆಲ್‌ನ ಕೇಸಿಂಗ್ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ವಾದಿಯವರು ಕೊರೆಸಿದ ಬೋರ್‌ವೆಲ್ ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖುದ್ದಾಗಿ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಃ59/ಪಿ1 ರಲ್ಲಿ 27 ಗುಂಟೆ ವಿಸ್ತೀರ್ಣದ ಜಮೀನನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ಹೇಳುವ ಬಗ್ಗೆ ನಾನು ಸರ್ವೆ ದಾಖಲೆಗಳನ್ನು ನೋಡಿರುತ್ತೇನೆ. ಇಲ್ಲಿಯವರೆಗೂ ಸರ್ವೆ ಅಧಿಕಾರಿಗಳು ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ 27 ಗುಂಟೆ ಒತ್ತುವರಿ ಮಾಡಿರುವ ಹಾಗೇ ವರದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷಿಯಲ್ಲಿ ಹೇಳಿದ ಹೇಳಿಕೆಯೂ ಊಹಾತ್ಮಕ ಹೇಳಿಕೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸರ್ವೆ ನಂಃ59/ಪಿ ರಲ್ಲಿ ವಿಸ್ತೀರ್ಣ 02 ಎಕರೆ 37 ಗುಂಟೆ ಜಮೀನನ್ನು ನಾನು ಸ್ವಾಧೀನ ಮಾಡಿದ ಬಗ್ಗೆ ತೋರಿಸಲು ದಾಖಲೆಗಳು ಇರುತ್ತವೆ ಎಂದರೆ ಸಾಕ್ಷಿಯೂ ಬಾಯಿ ಮಾತಿನಿಂದ ಸಾಗುವಳಿ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನನ್ನ ವಿದ್ಯಾಬ್ಯಾಸ 7 ತರಗತಿ ಇರುತ್ತದೆ. ಕೃಷಿ ಜಮೀನನ್ನು ಕೋರು ಮಾಡಲು ಕಾನೂನಿನ ಅಡಿಯಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸಾಕ್ಷಿಯೂ ಇದೆ ಎಂದು ಹೇಳುತ್ತಾರೆ. ನನಗೆ ಆ ಬಗ್ಗೆ ಕಾನೂನು ಗೊತ್ತಿರುವುದಿಲ್ಲ. ವಾದಿ ಮತ್ತು ನಾನು ಒಂದೇ ಶಾಲೆಯಲ್ಲಿ ಓದಿರುತ್ತೇವೆ. ಇದೇ ವಿಶ್ವಾಸದಲ್ಲಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜ್ಯೋತಿಪುರ ಗ್ರಾಮದಿಂದ ಹನುಮಂತಾಪುರ ಗ್ರಾಮಕ್ಕೆ ಬಂದು ದಾವಾ ಆಸ್ತಿಗೆ ಹೋಗಬೇಕು ಎಂದರೆ ಸರಿ. ಹನುಮಂತಾಪುರ ಗ್ರಾಮದಿಂದ ದಾವಾ ಆಸ್ತಿಗೆ ಹೋಗುವಾಗ ರಸ್ತೆಯಿಂದ ಪೂರ್ವಕ್ಕೆ ಯಾರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಬಹಳ ಜಮೀನು ಇರುತ್ತವೆ ಸದರಿ ಜಮೀನುಗಳ ಮಾಲೀಕರ ಹೆಸರು ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಹನುಮಂತಾಪುರ ಗ್ರಾಮದಿಂದ ದಾವಾ ಆಸ್ತಿಗೆ ಹೋಗುವಾಗ ರಸ್ತೆಯಿಂದ ಪಶ್ಚಿಮಕ್ಕೆ ಯಾರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಮೂರು ಜಮೀನು ಇರುತ್ತವೆ ಸದರಿ ಜಮೀನುಗಳ ಮಾಲೀಕರ ಹೆಸರು ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಹನುಮಂತಾಪುರ ಗ್ರಾಮದಿಂದ ದಾವಾ ಆಸ್ತಿಗೆ ಹೋಗುವಾಗ ರಸ್ತೆಯಿಂದ ಪಶ್ಚಿಮಕ್ಕೆ 09 ಜನರ ಜಮೀನುಗಳು ಬರುತ್ತದೆ ಎಂದರೆ ಸರಿಯಲ್ಲ. ಅದೇ

ರೀತಿ ಹನುಮಂತಾಪುರ ಗ್ರಾಮದಿಂದ ದಾವಾ ಆಸ್ತಿಗೆ ಹೋಗುವಾಗ ರಸ್ತೆಯಿಂದ ಪೂರ್ವಕ್ಕೆ 11 ಜನರ ಜಮೀನುಗಳು ಬರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಉಳುಮೆ ಮಾಡಿದ್ದರೆ ಸರಿಯಾದ ರೀತಿಯಲ್ಲಿ ಯಾರ ಜಮೀನು ಬರುತ್ತದೆ ಎಂದು ಹೇಳಲು ಆಗುತ್ತಿತ್ತು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಉಳುವೆ ಮಾಡದಿದ್ದರಿಂದ ವಾಸ್ತವವಾಗಿ ಯಾರೆಲ್ಲಾ ಜಮೀನುಗಳು ಬರುತ್ತವೆ ಎಂದು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಯರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ

**ಸಿವಿಲ್ ನ್ಯಾಯಾಧೀಶರು, ಜಗಳೂರು**